# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 164, ವಿದ್ಯಾಪೀಠ ಬೆಂಗಳೂರು.

ಸಂಖ್ಯೆ: ಸ.ಅ/ವಾ–164/ಪಿಆರ್//2021–22 ದಿನಾಂಕ: 16–08–2021

### ಆಗಸ್ಟ್ ಮಾಹೆಯ ವಾರ್ಡ್ ಸಮಿತಿ ಸಭೆಯ ನಡವಳಿಗಳು

***********

ವಿಷಯ: ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020–21, ದಿನಾಂಕ: 21–09–2020ರ ಆದೇಶದಂತೆ ದಿನಾಂಕ: 12–08–2021 ರಂದು ವಾರ್ಡ್ ಸಂಖ್ಯೆ: 164, ವಿದ್ಯಾಪೀಠದಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಸ್ಥಳ : ಬಿಬಿಎಂಪಿ ವಾರ್ಡ್ ಕಛೇರಿ, ವಿದ್ಯಾಪೀಠ ಸರ್ಕಲ್ ಹತ್ತಿರ

ಸಮಯ : ಬೆಳಿಗ್ಗೆ 11.00 ಗಂಟೆಗೆ

**ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಆರ್. ವಿಜಯ್‌ಕುಮಾರ್ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ ಜನಾರ್ಧನ್ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಗಿರಿನಗರ) ಉಪವಿಭಾಗ |
| 3 | ಶ್ರೀ ಟಿ. ಕೃಷ್ಣಮೂರ್ತಿ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್–164, ವಿದ್ಯಾಪೀಠ |
| 4 | ಶ್ರೀ ಸುನಿಲ್ | ಹಿರಿಯ ಆರೋಗ್ಯ ಪರಿವೀಕ್ಷಕರು (ಬಸವನಗುಡಿ ವಲಯ) |
| 5 | ಶ್ರೀ ವಿಷಕಂಠಯ್ಯ ಹೆಚ್.ಎನ್ | ಕೆಲಸ ಪರಿವೀಕ್ಷಕರು, ವಾರ್ಡ್–164, ವಿದ್ಯಾಪೀಠ |
| 6 | ಶ್ರೀ ಎಂ. ಸುರೇಶ್ | ಕಂದಾಯ ವಸೂಲಿಗಾರರು |
| 7 | ಡಾ॥ ಸುರ್ಜಿತ್ .ಟಿ | ವೈದ್ಯಾಧಿಕಾರಿಗಳು |
| 8 | ಜೆ.ಕೆ ಕೃಷ್ಣ | ಸಹಾಯಕ ಅಭಿಯಂತರರು (ಬೆಂಗಳೂರು ಜಲ ಮಂಡಳಿ) |
| 9 | ಅರುಣ್‌ಕುಮಾರ್ | ಮಾರ್ಷಲ್ |

ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳಾದ ಶ್ರೀ ಆರ್. ವಿಜಯ್‌ಕುಮಾರ್ ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಮತ್ತು ಸದಸ್ಯರಿಗೆ ಸ್ವಾಗತ ಕೋರುವುದರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

1. ವಾರ್ಡ್–164ರ ವ್ಯಾಪ್ತಿಯಲ್ಲಿನ ತ್ಯಾಜ್ಯವನ್ನು ಸಮರ್ಪಕವಾಗಿ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ ಚರ್ಚೆಯನ್ನು ಆರಂಭಿಸಲಾಯಿತು. ಈ ಸಂಬಂಧ ಶ್ರೀ ಕುಮಾರ್ ರವರು ವಿವರಿಸುತ್ತಾ ವಿದ್ಯಾಪೀಠ ವೃತ್ತದಿಂದ 43ಎ ಬಸ್ ನಿಲ್ದಾಣದ ವರೆಗಿನ ಮುಖ್ಯರಸ್ತೆಯ ಎರಡು ಬದಿಗಳಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ತೆರವುಗೊಳಿಸುವ ಬಗ್ಗೆ ಪ್ರಸ್ತಾಪಿಸಿದರು, ಈ ಸಂಬಂಧ ತ್ಯಾಜ್ಯ ಉಸ್ತುವಾರಿ ಮೇಸ್ತ್ರಿಗಳು ಕಸದ ಸಮರ್ಪಕ ಸಂಗ್ರಹಣೆ ಹಾಗೂ ತೆರವುಗೊಳಿಸುವುದಾಗಿ ತಿಳಿಸಿರುತ್ತಾರೆ ಹಾಗೂ ಸ್ವಾತಂತ್ರ್ಯೋತ್ಸವದ ಪ್ರಯುಕ್ತ ವಾರ್ಡ್ ವ್ಯಾಪ್ತಿಯಲ್ಲಿನ ಉದ್ಯಾನವನ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಸ್ವಚ್ಛಗೊಳಿಸಲು ಸೂಚಿಸಲಾಯಿತು.

(ಮು.ತಿ.ನೋ)

2. ಅರಣ್ಯ ಇಲಾಖೆಯಿಂದ ಸಭೆಗೆ ಆಗಮಿಸಿದ RFO ಶ್ರೀ ತ್ಯಾಗರಾಜುರವರಿಗೆ ವಾರ್ಡ್ ವ್ಯಾಪ್ತಿಯಲ್ಲಿ ಒಣಗಿ ಬೀಳುವ ಸ್ಥಿತಿಯಲ್ಲಿನ ಮರದ ರೆಂಬೆಕೊಂಬೆಗಳನ್ನು ತೆರವುಗೊಳಿಸಲು ಸೂಚಿಸಿ 15 ದಿನಕ್ಕೊಮ್ಮೆ ವಾರ್ಡ್ ವ್ಯಾಪ್ತಿಯಲ್ಲಿನ ಮುಖ್ಯರಸ್ತೆ, ಅಡ್ಡರಸ್ತೆಗಳಲ್ಲಿನ ಒಣಗಿದ, ಬೀಳುವ ಹಂತದಲ್ಲಿರುವ ಮರದ ಕೊಂಬೆ ರೆಂಬೆಗಳನ್ನು ತೆರವುಗೊಳಿಸಲು ಸೂಚಿಸಲಾಯಿತು. ಈ ಸಂಬಂಧ ಶ್ರೀ ತ್ಯಾಗರಾಜುರವರು ಒಣಗಿದ ರೆಂಬೆಕೊಂಬೆಗಳ ವಿವರವನ್ನು ನೀಡಿದ್ದಲ್ಲಿ ತೆರವುಗೊಳಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ.

3. ನಂತರ ಆರೋಗ್ಯ ಇಲಾಖೆಗೆ ಸಂಬಂಧಿಸಿದ ವಿಚಾರಗಳನ್ನು ಪ್ರಸ್ತಾಪಿಸಲಾಯಿತು. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಡಾ॥ ಸುರ್ಜಿತ್ ರವರು ಮಾತನಾಡಿ, ಕೋವಿಡ್-19ರ ವಿಷಯವಾಗಿ ಚುಚ್ಚುಮದ್ದುಗಳನ್ನು ಆದ್ಯತೆ ಮೇರೆಗೆ ನೀಡಲಾಗುತ್ತಿದ್ದು, ಕೊರೋನ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಸಂಬಂಧ ಕಾರ್ಯಕ್ರಮಗಳನ್ನು ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ. ಮತ್ತು ಸೋಂಕಿತರ ಪರೀಕ್ಷೆ ಮತ್ತು ಸೋಂಕಿತರ ಆಸ್ಪತ್ರೆ ಸೇರಿಸುವ ಸಂಬಂಧ, ವಿಚಾರಣೆ ಮತ್ತು ಸಲಹೆಗಾಗಿ ವೈದ್ಯರನ್ನು ಒಳಗೊಂಡ Triaz Centre ಗಳನ್ನು ಗವಿಪುರಂ ಗುಟ್ಟಹಳ್ಳಿಯಲ್ಲಿ ಸ್ಥಾಪಿಸಿದ್ದು, ವಾರ್ಡ್-164 ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ನಾಗರೀಕರಿಗೆ ಸದರಿ Triaz Centre, ದೂರ ಇರುವುದರಿಂದ ವಾರ್ಡ್-164ರ ವ್ಯಾಪ್ತಿಯಲ್ಲಿಯೇ ಒಂದು Triaz Centreನ್ನು ಸ್ಥಾಪಿಸಲು ಸೂಚಿಸಲಾಯಿತು.

4. ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿ, ಕಂದಾಯವನ್ನು ಪೂರ್ಣ ಪ್ರಮಾಣದಲ್ಲಿ ವಸೂಲಿ ಮಾಡಿರುವ ಬಗ್ಗೆ ಕಂದಾಯ ಪರಿವೀಕ್ಷಕರು ತಿಳಿಸಿರುತ್ತಾರೆ. ಬಿ.ಎಂ.ಟಿ.ಸಿ (ಸಾರಿಗೆ) ಇಲಾಖೆಯಿಂದ ಬರಬೇಕಾದ ರೂ: 40.00 ಲಕ್ಷಗಳ ಕಂದಾಯ ತೆರಿಗೆಯನ್ನು ವಸೂಲಿ ಮಾಡಲು ನೋಡಲ್ ಅಧಿಕಾರಿಗಳು ಸೂಚಿಸಿರುತ್ತಾರೆ ಹಾಗೂ ನಾಗರೀಕರ ಮತದಾರರ ಗುರುತಿನ ಚೀಟಿಯ ವಿತರಣೆ ಬಗ್ಗೆ ಚರ್ಚಿಸಿ ಕೈಗೊಂಡಿರುವ ಕ್ರಮದ ಬಗ್ಗೆ ವಿವರ ಪಡೆಯಲಾಯಿತು.

5. ಮುಂದುವರೆದು, ಬೆಂಗಳೂರು ಜಲಮಂಡಳಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಸದರಿಯವರು ಒಳಚರಂಡಿ ಚೇಂಬರ್‌ಗಳಿಂದ ತೆಗೆದ ತ್ಯಾಜ್ಯವನ್ನು ಸಂಗ್ರಹಿಸಿ ವಿಲೇವಾರಿ ಮಾಡುವ ಬಗ್ಗೆ ಉಪಸ್ಥಿತರಿದ್ದ ಇಲಾಖಾ ಮುಖ್ಯಸ್ಥರಿಗೆ ತಿಳಿಸಲಾಯಿತು ಮತ್ತು ದುರಸ್ಥಿ ಮಾಡಲು ರಸ್ತೆ ಅಗೆಯುವ ಭಾಗಗಳನ್ನು ಪುನರ್‌ನಿರ್ಮಾಣ ಮಾಡಲು ಸದರಿಯವರಿಗೆ ತಿಳಿಸಲಾಯಿತು.

6. ಸಭೆಯಲ್ಲಿ ಭಾಗವಹಿಸಿದ್ದ ಮಾರ್ಷಲ್‌ಗಳೊಂದಿಗೆ ಚರ್ಚಿಸಿ ದಂಡ ವಸೂಲಾತಿಯ ಬಗ್ಗೆ ವಿವರ ಪಡೆಯಲಾಯಿತು. ಅಂಗಡಿ ಮಾಲ್‌ಗಳಲ್ಲಿ ಹಾಗೂ ಹೆಚ್ಚು ಜನದಟ್ಟಣೆ ಇರುವ ಪ್ರದೇಶಗಳಲ್ಲಿ ಜನರಿಗೆ ಮಾಸ್ಕ್ ಧರಿಸುವ ಬಗ್ಗೆ ಸಾಮಾಜಿಕ ಅಂತರ ಪಾಲನೆ ಬಗ್ಗೆ ತಿಳುವಳಿಕೆ ನೀಡಲು ಮಾರ್ಷಲ್‌ಗಳಿಗೆ ಸೂಚಿಸಲಾಯಿತು.

7. ನಂತರ ಬೆಸ್ಕಾಂನಿಂದ ಸಭೆಗೆ ಆಗಮಿಸಿದ ಮುನಿರಾಜು, ಕಿರಿಯ ಅಭಿಯಂತರರೊಂದಿಗೆ ಚರ್ಚಿಸುತ್ತಾ ಸಾರ್ವಜನಿಕರ ಓಡಾಟಕ್ಕೆ ತೊಂದರೆ ಉಂಟು ಮಾಡುವ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಳಾಂತರಗೊಳಿಸಲು ಸೂಚಿಸಲಾಯಿತು.

(ಮು.ತಿ.ನೋ)

ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ [redacted] ಅಭಿಯಂತರರು
ವಾರ್ಡ್ ಸಂಖ್ಯೆ: 164, ವಿದ್ಯಾಪೀಠ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 164, ವಿದ್ಯಾಪೀಠ

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎನ್. ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಮಾಹಿಗಾಗಿ ಸಲ್ಲಿಸಿದೆ.
4. ಮಾನ್ಯ ಉಪ ಆಯುಕ್ತರು ((ಆಡಳಿತ) ರವರ ಮಾಹಿಗಾಗಿ ಸಲ್ಲಿಸಿದೆ.
5. ಮಾನ್ಯ ಜಂಟಿ ಆಯುಕ್ತರು (ದಕ್ಷಿಣ) ರವರ ಮಾಹಿಗಾಗಿ ಸಲ್ಲಿಸಿದೆ.
6. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
8. ವಾರ್ಡ್ ಸಮಿತಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
9. ಕಛೇರಿ ಪ್ರತಿ.